# PARAMPARIKA KOOTA
# A TRIP WITH TRADITIONAL HERITAGE FOR BA STUDENTS

**28-01-2020**






Vidyavardhaka First Grade College, Mysuru – Events, Special Talks, Seminars and Activities page













# ಶೈಕ್ಷಣಿಕ ಪ್ರವಾಸ

ನಮ್ಮ ಕಾಲೇಜಿನ ಇತಿಹಾಸ ವಿಭಾಗ ಮತ್ತು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯ & ಪರಂಪರೆ ಇಲಾಖೆಯ ಸಹಯೋಗದೊಂದಿಗೆ ದಿನಾಂಕ: 28.01.2020 ರಂದು ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಪ್ರವಾಸವು ಸೋಮನಾಥಪುರ, ಮುಡುಕುತೊರೆ, ತಲಕಾಡು, ಶಿವನಸಮುದ್ರ, ಗಗನಚುಕ್ಕಿ ಜಲಪಾತ, ಭರಚುಕ್ಕಿ ಜಲಪಾತ ಮಲೆಮಹದೇಶ್ವಬೆಟ್ಟವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶದಿಂದ ಆಯೋಜಿಸಲಾಗಿತ್ತು. ಅಂದು ಬೆಳಿಗ್ಗೆ 6.00ಕ್ಕೆ ಕಾಲೇಜಿನಿಂದ ಹೊರಟು ಟಿ.ನರಸೀಪುರ ತಾಲ್ಲೂಕಿನ ಸೋಮನಾಥಪುರ ಐತಿಹಾಸಿಕ ಚನ್ನಕೇಶವ ಸ್ವಾಮಿ ಸನ್ನಿಧಿಯಲ್ಲಿ ಮೊದಲು ದರ್ಶನ ಪಡೆದ ನಂತರ ಅಲ್ಲಿಯೇ ಉಪಾಹಾರ ಸೇವಿಸಿದೆವು.

ಸೋಮನಾಥಪುರದ ಚನ್ನಕೇಶವ ದೇವಸ್ಥಾನದಲ್ಲಿನ ಹೊಯ್ಸಳ ವಾಸ್ತುಶಿಲ್ಪದ ಬಗ್ಗೆ ವಿವರವಾಗಿ ವಿದ್ಯಾರ್ಥಿಗಳಿಗೆ ವಿವರಣೆ ನೀಡಿ ಪೂರ್ತಾ ದೇವಾಲಯವನ್ನು ವೀಕ್ಷಿಸಿದೆವು. ಹಳೇಬೀಡು–ಬೇಲೂರು ಎರಡೂ ದೇವಸ್ಥಾನಗಳು ಹಾಗೂ ಸೋಮನಾಥಪುರದ ವಾಸ್ತುಶಿಲ್ಪದ ಸಾಮ್ಯತೆಗಳನ್ನು ವಿಶ್ಲೇಷಿಸಲಾಯಿತು.

ಸೋಮನಾಥಪುರ ದೇವಾಲಯದಿಂದ ಮುಡುಕುತೊರೆ ಕ'ಡೆಗೆ ಪ್ರಯಾಣ ಬೆಳೆಸಿದೆವು. ಮುಡುಕುತೊರೆ ದೇವಾಲಯವು ಕಾವೇರಿ ನದಿ ದಂಡೆಯಲಿದ್ದು ಬೆಟ್ಟದ ಮೇಲೆ ಶ್ರೀ ಮಲ್ಲಿಕಾರ್ಜುನ ಹಾಗೂ ಭ್ರಮರಾಂಭಿಕೆ ದರ್ಶನ ಪಡೆದು ತಲಕಾಡಿನ ಕಡೆ ಪ್ರಯಾಣ ಪ್ರಾರಂಭಿಸಿದೆವು. ತಲಕಾಡಿನಲ್ಲಿ ಮರಳಿನ ಮಧ್ಯದಲ್ಲಿ ಉದುಗಿ ಹೋಗಿದ್ದ ದೇವಾಲಯಗಳ ಬಗ್ಗೆ ತಿಳಿದು ಎಲ್ಲಾ ದೇವಾಲಯಗಳ ದರ್ಶನ ಪಡೆದೆವು. ತಲಕಾಡು ಕಾವೇರಿ ನದಿಯ ತೀರದಲ್ಲಿದ್ದು ಹಿಂದೆ ಸಂಪೂರ್ಣವಾಗಿ ಮರಳಿನಿಂದ ಮುಚ್ಚಿಹೋಗಿ ಪ್ರಸ್ತುತ ಮರಳಿನ ಮಧ್ಯಭಾಗದಲ್ಲಿಯೇ ಹಲವಾರು ದೇವಾಲಯಗಳ ಉತ್ಖನನ ಆಗಿರುವುದು ವಿಸ್ಮಯದ ಸಂಗತಿ ವೈದ್ಯನಾಥೇಶ್ವರ ದೇವಾಲಯದ ವಾಸ್ತುಶಿಲ್ಪ, ಗಂಗರ ಆಡಳಿತದ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಲಾಯಿತು.

ತಲಕಾಡಿನ ನಂತರ ನಮ್ಮ ಪಯಣ ಶಿವನ ಸಮುದ್ರದ ಕಡೆಗೆ. ಶಿವನ ಸಮುದ್ರವು ಕಾವೇರಿ ನದಿಯಿಂದ ಏರ್ಪಟ್ಟಿರುವ ದ್ವೀಪವಾಗಿದ್ದು ಇಲ್ಲಿ ಕಾವೇರಿಯು ಭರಚುಕ್ಕಿ ಹಾಗೂ ಗಗನಚುಕ್ಕಿಯಾಗಿ ಎರಡು ಜಲಪಾತಗಳನ್ನು ಸೃಷ್ಟಿಸಿದ್ದು ಜಲಪಾತಗಳ ದೃಶ್ಯ ರುದ್ರರಮಣೀಯವಾಗಿದೆ. ಶಿವನಸಮುದ್ರ ಜಲವಿದ್ಯುತ್ ಯೋಜನೆಯು ಏಷ್ಯಾದ ಮೊದಲ ಜಲವಿದ್ಯುತ್ ಯೋಜನೆಯಾಗಿದ್ದು ಇದರ ರುವಾರಿ ಮೈಸೂರು ಒಡೆಯರು ಮತ್ತು ಇಲ್ಲಿ ಉತ್ಪತ್ತಿಯಾದ ವಿದ್ಯುತ್ ಅನ್ನು ಕೋಲಾರ ಚಿನ್ನದ ಗಣಿ ಹಾಗೂ ಬೆಂಗಳೂರಿಗೆ ಸರಬರಾಜು ಮಾಡಲಾಗುತ್ತಿತ್ತೆಂದು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು.

ನಂತರ ನಮ್ಮ ಪ್ರವಾಸವು ಶ್ರೀಮಲೆಮಹದೇಶ್ವರ ಬೆಟ್ಟದ ಕಡೆ. ಎಲ್ಲಾ ವಿದ್ಯಾರ್ಥಿಗಳಿಗೆ ಮಲೆಮಹದೇಶ್ವರ ದೇವರ ದರ್ಶನ ಮಾಡಿಸಲಾಯಿತು. ನಂತರ ಮೈಸೂರುಗೆ ಹಿಂದಿರುಗಿದೆವು.

ಶೈಕ್ಷಣಿಕ ಪ್ರವಾಸವು ಎಲ್ಲಾ ವಿದ್ಯಾರ್ಥಿಗಳಿಗೂ ತುಂಬಾ ಇಷ್ಟವಾಗಿದ್ದು ಪ್ರವಾಸವನ್ನು ಆಯೋಜಿಸಲು ಅನುವು ಮಾಡಿಕೊಟ್ಟ ಪ್ರಾಚ್ಯವಸ್ತು ಇಲಾಖೆಗೆ ವಂದನೆಗಳನ್ನು ಅರ್ಪಿಸುತ್ತೇವೆ. ತಮ್ಮ ಸಹಕಾರ ಹಾಗೂ ಸಹಕಾರವನ್ನು ಇನ್ನುಮುಂದೆ ಸಹ ನಿರೀಕ್ಷಿಸುತ್ತಿದ್ದೇವೆ.